ಸಂದರ್ಶನ

# ಪುಟಾಣಿಯ ಪರಿಸರ ಪ್ರೇಮಕ್ಕೆ ಜಾಗತಿಕ 'ಮಾನ್ಯ'ತೆಯ ಹರ್ಷ

**'ಆ್ಯಕ್ಷನ್ ಫಾರ್ ನೇಚರ್' ಎಂಬ ಅಮೆರಿಕದ ಸರ್ಕಾರೇತರ ಸಂಸ್ಥೆ ನೀಡುವ 'ಇಂಟರ್‌ನ್ಯಾಷನಲ್ ಯಂಗ್ ಇಕೊ ಹೀರೊ' ಪ್ರಶಸ್ತಿ ಪಡೆದ ವಿಶ್ವದ 17 ಯುವ ಪರಿಸರ ಕಾರ್ಯಕರ್ತರಲ್ಲಿ ಐವರು ಭಾರತೀಯರು. ಅವರಲ್ಲೊಬ್ಬರು ಬೆಂಗಳೂರಿನ ಮಾನ್ಯ ಹರ್ಷ. ಪ್ರಶಸ್ತಿ ನೆಪದಲ್ಲಿನ ಈ ಮಾತುಕತೆ, ಹೊಸ ತಲೆಮಾರಿಗೆ ಅಗತ್ಯವಾದ ಪರಿಸರ ಕಾಳಜಿಯ ಅಗತ್ಯವನ್ನು ಒತ್ತಿ ಹೇಳುತ್ತಿದೆ.**

■ **ರಾಘವೇಂದ್ರ ಕೆ.**



◆ **'ಇಂಟರ್‌ನ್ಯಾಷನಲ್ ಯಂಗ್ ಇಕೊ ಹೀರೊ' ಪ್ರಶಸ್ತಿ ಅಂದರೆ ಏನು? ಅದನ್ನು ಯಾರು ಕೊಡುತ್ತಾರೆ?**

ಅಮೆರಿಕದ ವಾಷಿಂಗ್ಟನ್‌ನಲ್ಲಿರುವ 'ಆ್ಯಕ್ಷನ್ ಫಾರ್ ನೇಚರ್' ಎಂಬ ಸಂಸ್ಥೆ ಪರಿಸರ ಮತ್ತು ಹವಾಮಾನ ಕ್ಷೇತ್ರದಲ್ಲಿ ಕೆಲಸ ಮಾಡುವ 8ರಿಂದ 12 ವರ್ಷದ ಒಳಗಿನ ಕಾರ್ಯಕರ್ತರನ್ನು ಪ್ರೋತ್ಸಾಹಿಸಲು ಈ ಪ್ರಶಸ್ತಿ ನೀಡುತ್ತದೆ. 2023ನೇ ಸಾಲಿನಲ್ಲಿ ಪ್ರಪಂಚದ 17 ಯುವ ಪರಿಸರ ಕಾರ್ಯಕರ್ತರಿಗೆ ಈ ಪುರಸ್ಕಾರ ನೀಡಿದೆ. ಅದರಲ್ಲಿ ನನಗೆ ಎರಡನೇ ಸ್ಥಾನ ಸಿಕ್ಕಿದೆ. ಆನ್‌ಲೈನ್ ಮೂಲಕವೇ ಪ್ರಶಸ್ತಿ ಪತ್ರ ಪ್ರದಾನ ಮಾಡಲಾಗುತ್ತದೆ. ನಂತರ ಅದರ ಮೂಲಪ್ರತಿಯನ್ನು ಅಂಚೆ ಮೂಲಕ ಕಳಿಸಿಕೊಡುತ್ತಾರೆ. 500 ಡಾಲರ್ ನಗದು ಬಹುಮಾನವನ್ನೂ ಪ್ರಶಸ್ತಿ ಒಳಗೊಂಡಿದೆ.

◆ **ಬ್ಲಾಗ್, ಪುಸ್ತಕ, ಶಾಲೆ, ಓದಿನ ಜೊತೆ ಪರಿಸರ ಕ್ಷೇತ್ರದಲ್ಲಿ ಕೆಲಸ ಮಾಡಲು ಸಮಯ ಹೇಗೆ ಸಿಗುತ್ತದೆ?**

ಬೆಂಗಳೂರು ಬಿಟಿಎಂ ಲೇಔಟ್‌ನ 'ವಿಬ್‌ಗ್ಯೂರ್ ಹೈ' ಶಾಲೆಯಲ್ಲಿ 8ನೇ ತರಗತಿಯಲ್ಲಿ ಓದುತ್ತಿದ್ದೇನೆ. ಶಾಲೆಯೇ ನನ್ನನ್ನು ಬೆಳೆಸಿದೆ. ನನ್ನ ಎಲ್ಲ ಕೆಲಸಕ್ಕೂ ಶಾಲೆಯಿಂದ ಬೆಂಬಲ ಸಿಕ್ಕಿದೆ. ಪಠ್ಯದ ಓದು ಅದರ ಪಾಡಿಗೆ ಅದು ನಡೀತಾ ಇರುತ್ತದೆ. ವಾರಾಂತ್ಯ ಮತ್ತು ಬಿಡುವಿನ ವೇಳೆಯನ್ನು ಪರಿಸರದ ಕೆಲಸಕ್ಕೆ ತೊಡಗಿಸಿಕೊಳ್ಳುತ್ತೇನೆ. ಪ್ರವಾಸ, ಸುತ್ತಾಟದ ಸಂದರ್ಭದಲ್ಲಿ ಸ್ವಚ್ಛತೆಯ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ. ಉಳಿದಂತೆ ಏನಾದರೂ ಬರೆಯಬೇಕು ಅನ್ನಿಸಿದಾಗ ಬರೆಯುತ್ತೇನೆ. ಸಮಯದ ತೊಂದರೆ ಅನ್ನಿಸುವುದಿಲ್ಲ.

◆ **ಪರಿಸರ ಪ್ರಜ್ಞೆ ಬಂದಿದ್ದು ಹೇಗೆ? ಆ ಕ್ಷೇತ್ರದಲ್ಲಿ ಕೆಲಸ ಆರಂಭ ಯಾವಾಗಾಯಿತು?**

ನನ್ನ ಅಜ್ಜಿ ವಿ. ರುದ್ರಮ್ಮ ಅವರು ಹೇಳುತ್ತಿದ್ದ ಕಥೆಗಳಿಂದ ಪ್ರಭಾವಿತಳಾಗಿದ್ದೇನೆ. ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದ ಅವರು ನಮ್ಮನ್ನು ಅಗಲಿದ್ದಾರೆ. ಪರಿಸರ ಸಂರಕ್ಷಣೆ ಮತ್ತು ಪೋಷಣೆಗೆ